## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ. 262/2014**

ಚಾಸಾ-32 ಫ್ರಾಸಾ-13

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 06-12-2025

| | | |
|---|---|---|
| ಹೆಸರು | : | ಶಿವಾನಂದ |
| ತಂದೆಯ ಹೆಸರು | : | ಸಂಗಪ್ಪ ದೊಡ್ಮಣಿ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ನಿವೃತ್ತ PSI |
| ವಾಸಸ್ಥಳ | : | ವಿಜಯಪುರ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ದಿಃ 25-09-2013 ರಿಂದ ಅಗಸ್ಟ 2014 ರವರೆಗೆ ರೇವೂರು ಪೋಲಿಸ ಠಾಣೆಯಲ್ಲಿ ಉಪನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ಈ ಪ್ರಕರಣದ ಕಡತವನ್ನು ಚಾಸಾ 30 ರಿಂದ ಪಡೆದು, ಅವರು ನೀಡಿದ ಕಡತಗಳನ್ನು ಪರಿಶೀಲನೇ ಮಾಡಿ ದಿಃ 28-12-2013 ರಂದು ಚಾಸಾ 14, 15 ರವರ ಹೇಳಿಕೆ ಮತ್ತು ಮರುಹೇಳಿಕೆ ಪಡೆದಿರತ್ತೇನೆ. ದಿಃ 30-12-2013 ರಂದು ಚಾಸಾ 13 ರವರ ಹೇಳಿಕೆ ಪಡೆದಿರುತ್ತೇನೆ. ಸಾಕ್ಷಿದಾರರು ಹಾಜರುಪಡಿಸಿದ 5 ಡಿಡಿ ಪ್ರತಿಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 03-02-2014 ರಂದು ಚಾಸಾ 12 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 05-06-2014 ರಂದು CEO ಜಿಲಾ ಪಂಚಾಯತಿ ಕಲಬುರಗಿ ರವರು ನೀಡಿದ ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 24-06-2014 ರಂದು 1 ಮತ್ತು 2 ನೇ ಆರೋಪಿಯ ಪತ್ತೆ ಕುರಿತು ಚಾಸಾ 29 ರವರು ವರದಿ ನೀಡಿರುತ್ತಾರೆ. ದಿಃ 01-07-2014 ರಂದು ಚಾಸಾ 12 ರವರ ಬ್ಯಾಂಕ ನೀಡಿದ ಬ್ಯಾಂಕ ಖಾತೆ ವಿವರ ಪಟ್ಟಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 04-07-2014 ರಂದು ಚಾಸಾ 28 ರವರು 1 ಮತ್ತು 2 ನೇ ಆರೋಪಿ ಪತ್ತೆ ಕುರಿತು ಸಲ್ಲಿಸಿದ ವರದಿಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

4 ನೇ ಆರೋಪಿಯೂ ನ್ಯಾಯಾಲಯದ ಬೇಲ ಆದೇಶದ ಮೇಲೆ ಹಾಜರಾಗಿದ್ದು ಆತನನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ದಿಃ 05-07-2014 ರಂದು ಚಾಸಾ 25 ರವರ ಹೇಳಿಕೆ ಪಡೆದಿರುತ್ತೇನೆ. ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಸಾಕಷು ಪುರಾವೆ ದೊರೆತಿದರಿಂದ ತನಿಖೆ ಪೂರ್ಣಗೊಂಡಿದರಿಂದ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಕೃಷ್ಣ ಗ್ರಾಮೀಣ ಬ್ಯಾಂಕ ಬ್ರಾಂಚ ಗುಲ್ಬರ್ಗಾ ರವರು ನೀಡಿದ 4 ಡಿಡಿ ಪ್ರತಿಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ **38** ರಿಂದ **41** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ 38(ಎ) ಎಂದು ಗುರುತಿಸಲಾಯಿತು.

ವ್ಯವಸಾಯ ಸೇವಾ ಸಹಕಾರ ಬ್ಯಾಂಕ ನೀಲೂರು ರವರ ನೀಡಿದ ಜಮಾ ರಶೀಗಳನ್ನು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 14 ರಿಂದ 20 ಎಂದು ಗುರುತಿಸಲಾಗಿದೆ. ಮತ್ತು ಒಟ್ಟು 8 ಡಿಡಿ ಪ್ರತಿಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 21 ರಿಂದ 28 ಎಂದು ಗುರುತಿಸಲಾಗಿದೆ.

ಛತ್ರಪತಿ ಶಿವಾಜಿ ಮಹಾರಾಜ ಸ.ಬ್ಯಾಂಕ ನಿಯಮಿತ ಗುಲ್ಬರ್ಗಾ ರವರು ನೀಡಿದ ವರದಿಯನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ **42** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ **42**(ಎ) ಎಂದು ಗುರುತಿಸಲಾಯಿತು.

ಜಿಲ್ಲಾ ಪಂಚಾಯತಿ ಕಾರ್ಯಾಲಯ ಗುಲ್ಬರ್ಗಾ ರವರು ನೀಡಿದ ವರದಿಯನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ **43** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ **43**(ಎ) ಎಂದು ಗುರುತಿಸಲಾಯಿತು.

ಚಾಸಾ 28, 29 ರವರು ನೀಡಿದ ಆರೋಪಿ ಪತ್ತೆ ಕುರಿತು ನೀಡಿದ ವರದಿಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ **44** ಮತು **45** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ **44**(ಎ) ಮತ್ತು **45**(ಎ) ಎಂದು ಗುರುತಿಸಲಾಯಿತು.

4 ನೇ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **KGP** ವಕೀಲರಿಂದಃ-</u>

ನಾನು ಬ್ಯಾಂಕಿನಲ್ಲಿ ತನಿಖೆ ಮಾಡುವ ಕಾಲಕ್ಕೆ ಓಚರ ಮತ್ತು ಡಿಡಿಗಳನು ಪಡೆದಿರುತ್ತೇನೆ. ಎಲ್ಲಾ ಸಂಬಂಧಿಸಿದ ಬ್ಯಾಂಕಿನವರ ಹೇಳಿಕೆಯನ್ನು ಪಡೆದಿರುತ್ತೇನೆ. ಯಾವ ಯಾವ ದಿನಾಂಕದಂದು ಯಾವ

ಬ್ಯಾಂಕಿಗೆ ಭೇಟಿ ನೀಡಿದೆ ಎಂದು ಈಗ ನಿಖರವಾಗಿ ಹೇಳಲು ಬರುವುದಿಲ್ಲ. ಆರೋಪಿ ಪತ್ತೆ ಕುರಿತು ಸಿಬ್ಬಂದಿ ನಿಯೋಜಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸಮರ್ಪಕವಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿದ ಡಿಡಿ ಪ್ರತಿಗಳು ಸೃಷ್ಟಿಸಿದ ದಾಖಲಾತಿಗಳು ಇರುತ್ತವೆ ಎಂದರೆ ಸರಿಯಲ್ಲ. ಆರೋಪಿತರ ಸ್ವಖುಷಿ ಹೇಳಿಕೆ ಪಡೆದಿಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ